# ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ.ನಂ.6981/2012

| | |
|---|---|
| ಸಾಕ್ಷಿದಾರರ ಹೆಸರು : | ವಜೀರ್ ಅಹಮ್ಮದ ಖಾನ್ |
| ತಂದೆಯ ಹೆಸರು : | ಹಮೀದ್ ಖಾನ್ |
| ವಯಸ್ಸು : | 73 ವರ್ಷ |
| ಉದ್ಯೋಗ : | ನಿವೃತ್ತ ಪಿ.ಎಸ್.ಐ |
| ವಾಸ : | ಲಕ್ಕಸಂದ್ರ, ಬೆಂಗಳೂರು. |

**ದಿನಾಂಕ 10/07/2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**
**ದಂ.ಪ್ರ.ಸಂ.ಕಲಂ. 299 ರ ಅಡಿಯಲ್ಲಿ ಸಾಕ್ಷಿಯ ಹೇಳಿಕೆಃ**

1. ನಾನು 2009 ರಿಂದ 2011 ರವರೆಗೆ ತಿಲಕ್ ನಗರ ಪೊಲೀಸ್ ಠಾಣೆಯಲ್ಲಿ ಆರಕ್ಷಕ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 05/12/2010 ರಂದು ನಾನು ಠಾಣೆಯಲ್ಲಿರುವಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಪ್ರಕರಣವನ್ನು ದಾಖಲಿಸಿ ಪ್ರ.ವ ವರದಿಯನ್ನು ಮೇಲಾಧಿಕಾರಿಯವರಿಗೆ ಮತ್ತು ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಪಂಚರಾದ ಚಾಸಾ-3 ಮತ್ತು 4 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಮದ್ಯಾಹ್ನ 12.00 ರಿಂದ 01.00 ಗಂಟೆಯವರೆಗೆ ಜರುಗಿಸಿರುತ್ತೇನೆ.

3. ಅದೇ ದಿನ ಸಂಜೆ 07.00 ಗಂಟೆಯ ಸಮಯದಲ್ಲಿ ನಾನು ಮತ್ತು ಸಿಬ್ಬಂದಿಗಳಾದ ಚಾಸಾ-6 ರಿಂದ 9 ರವರು ಜಯನಗರ 1ನೇ ಹಂತ, ಕಿತ್ತೂರು ರಾಣಿ ಚೆನ್ನಮ ಆಟದ ಮೈದಾನದ ರಸ್ತೆಯಲ್ಲಿ ಒಬ್ಬ ವ್ಯಕ್ತಿ ಪಲ್ಸರ್ ದ್ವಿಚಕ್ರ ವಾಹನ

ಸಂಖ್ಯೆ.ಕೆ.ಎ.03 ಹೆಚ್.ಸಿ 3892 ಇದನ್ನು ಚಲಾಯಿಸುತ್ತಿದ್ದವನು ನಮ್ಮನ್ನು ನೋಡಿ ತಪ್ಪಿಸಿಕೊಳ್ಳಲು ಪ್ರಯತ್ನ ಪಟ್ಟಾಗ ಆತನನ್ನು ಅಡ್ಡಗಟ್ಟಿ ಆತನನ್ನು ಹಿಡಿದಿರುತ್ತೇವೆ. ಆತನನ್ನು ವಿಚಾರಿಸಿದಾಗ ಆತ ತನ್ನ ಹೆಸರು ಆಸೀಫ್ ಎಂದು ತಿಳಿಸಿರುತ್ತಾನೆ ಮತ್ತು ಆತನ ಬಳಿ ಒಂದು ಡ್ರಾಗರ್ ಮತ್ತು ರೂ.24,000/- ನಗದು ಹಣ ಇತ್ತು ಹಾಗೂ ಅವುಗಳ ಬಗ್ಗೆ ವಿಚಾರಿಸಲಾಗಿ ಆತ ಸರಿಯಾಗಿ ಉತ್ತರ ನೀಡಲಿಲ್ಲ. ಆದ್ದರಿಂದ ಸದರಿ ದ್ವಿಚಕ್ರ ವಾಹನ ಸವಾರನನ್ನು , ದ್ವಿಚಕ್ರ ವಾಹನ , ಹಣ ಮತ್ತು ಡ್ರಾಗರ್ ಸಹಿತ ಠಾಣೆಗೆ ಕರೆತಂದು ಚಾಸಾ-15 ರವರ ಸಮಕ್ಷಮ ಹಾಜರು ಪಡಿಸಿರುತ್ತೇವೆ. ಅದರ ಬಗ್ಗೆ ನನ್ನ ವರದಿಯನ್ನು ಸಹ ಕೊಟ್ಟಿರುತ್ತೇನೆ.

4. ಚಾಸಾ-1 ರವರು ದೂರಿನಲ್ಲಿ ನಮೂದಿಸಿದ ದ್ವಿಚಕ್ರ ವಾಹನವನ್ನೇ ಅನುಮಾನಸ್ಪದ ವ್ಯಕ್ತಿ ಚಲಾಯಿಸುತ್ತಿದ್ದುದರಿಂದ ಈ ಪ್ರಕರಣಕ್ಕೆ ಸಂಬಂದಿಸಿದ ವಾಹನ ಎಂದು ತಿಳಿದು ಬಂದಿರುತ್ತದೆ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-15 ರವರಿಗೆ ವರ್ಗಾಯಿಸಿರುತ್ತೇನೆ. ಸದರಿ ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಆ ದಿನ ಹಿಡಿದಿದ್ದ ದ್ವಿಚಕ್ರ ವಾಹನವನ್ನು ಮತ್ತು ಡ್ರಾಗರ್ ನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ದೂರಿನ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. **ಆದ್ದರಿಂದ ದೂರನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.** ಸಾಕ್ಷಿಯು ಪ್ರ.ವ ವರದಿಯ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. **ಆದ್ದರಿಂದ ಪ್ರ.ವ ವರದಿಯನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು**. ಸಾಕ್ಷಿಯು ಸ್ಥಳ ಪಂಚನಾಮೆಯ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. **ಆದ್ದರಿಂದ ಸ್ಥಳ ಪಂಚನಾಮೆಯನ್ನು ನಿಪಿ-7 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು**.

ಸಾಕ್ಷಿಯು ನಿಪಿ-1 ರ ವರದಿಯ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ.

**ಆದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ. ಕೇ. ಸ. ಇ.

(ರಂಗೇಗೌಡ ಸಿ.)
ಮು.ಮ.ದಂ.ನ್ಯಾ.ಬೆಂ.ನಗರ.